ದಿನಾಂಕಃ 11-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ.ಜಿ.ಆರ್.ಜೆ. ವಕೀಲರಿಂದಃ-**

ನಾನು ಎಸ್.ಎಸ್.ಎಲ್.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಂಜುಂಡಪ್ಪರವರ ತಾತನ ಹೆಸರು ನನಗೆ ಗೊತ್ತಿಲ್ಲ. ಹನುಮಂತಪ್ಪರವರು 2005 ನೇ ಇಸವಿಯಲ್ಲಿ ಮೃತ ಪಟ್ಟಿರುತ್ತಾರೆ. ಹನುಮಂತಪ್ಪರವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇದ್ದರು ಎಂದು ನನಗೆ ಗೊತ್ತಿಲ್ಲ. ಹನುಮಂತಪ್ಪರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಾಯಿ ರಂಗಮ್ಮರವರು ಯಾವಾಗ ಮದುವೆಯಾದರು ಎಂಬ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ತಾಯಿ ರಂಗಮ್ಮರವರ ತಾಯಿಯ ಹೆಸರು ವೆಂಕಟಮ್ಮ ಎಂಬುದಾಗಿರುತ್ತದೆ. ವೆಂಕಟಮ್ಮರವರ ಗಂಡನ ಹೆಸರು ಗಂಗಯ್ಯ ಎಂದರೆ ಸರಿಯಲ್ಲ. ಸಾಕ್ಷಿಯು ಹನುಮಂತಪ್ಪ ಎಂಬುದಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ತಾಯಿ ರಂಗಮ್ಮರವರು ಮಧುಗಿರಿಯಲ್ಲಿಯೇ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಾಯಿ ಮಧುಗಿರಿ ಸರ್ಕಾರಿ ಆಸ್ಪತ್ರೆಯ ಎದುರುಗಡೆ ಇರುವ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಾಯಿಗೆ ಸಂಬಂಧಪಟ್ಟ ಶಾಲಾ ದೃಢೀಕರಣ ಪತ್ರದಲ್ಲಿ ಅವರ ತಂದೆಯ ಹೆಸರು ಗಂಗಯ್ಯ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ವೆಂಕಟಮ್ಮರವರು ಹನುಮಂತಪ್ಪರವರನ್ನು ಮದುವೆಯಾಗಿರುವ ಬಗ್ಗೆ

ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಅಜ್ಜಿ ಹನುಮಂತಪ್ಪರವರನ್ನು ಯಾವಾಗ ಮದುವೆಯಾಗಿದ್ದರು ಎಂಬುದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ವೆಂಕಟಮ್ಮರವರು ಕೊರಟಗೆರೆ ತಾಲ್ಲೂಕು, ಹುಲಿಕುಂಟೆ ಗ್ರಾಮಕ್ಕೆ ಮದುವೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಾನು ಹನುಮಂತಪ್ಪರವರನ್ನು ನೋಡಿರುವುದಿಲ್ಲ. ನನ್ನ ತಾತ ಹನುಮಂತಪ್ಪರವರು ರೈತರಾಗಿದ್ದರು. ನನ್ನ ತಾತ ವ್ಯವಸಾಯದ ಜೊತೆಗೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾತ ಅವರೆಕಾಯಿ, ಕಡಲೆಕಾಯಿ, ಅಡಿಕೆ, ತೆಂಗು ಮತ್ತು ಮಾವಿನ ಬೆಳೆಗಳನ್ನು ಬೆಳೆಯುತ್ತಿದ್ದರು. ಈ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದೊಡ್ಡನಂಜಪ್ಪ ಎಂಬುವರು ನನಗೆ ಗೊತ್ತಿಲ್ಲ. ನನ್ನ ತಾಯಿ ಯಾವ ದಿನಾಂಕದಂದು ಮೃತ ಪಟ್ಟರು ಎಂಬುದನ್ನು ಮರೆತು ಹೋಗಿರುತ್ತೇನೆ. ಹನುಮಂತಪ್ಪನ ಮಗ ಶ್ರೀರಾಮಯ್ಯರವರು ಯಾವ ದಿನಾಂಕದಂದು ಮೃತ ಪಟ್ಟರು ಎಂದು ನನಗೆ ಮರೆತು ಹೋಗಿರುತ್ತದೆ. ಅವರು ಕೊರೋನಾ ಸಮಯದಲ್ಲಿ ಮೃತ ಪಟ್ಟಿರುತ್ತಾರೆ. ಹನುಮಂತಪ್ಪರವರು ಮೃತ ಪಟ್ಟ ನಂತರ ಆತನಿಗೆ ಸಂಬಂಧಪಟ್ಟ ಆಸ್ತಿಗಳನ್ನು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದಿಲ್ಲ. ನಾನು ಹನುಮಂತಪ್ಪನ ವಾರಸುದಾರರು ಎಂಬ ಬಗ್ಗೆ ತಹಶೀಲ್ದಾರ್ ರವರಿಂದ ದಾಖಲೆಯನ್ನು ಪಡೆದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಶ್ರೀರಾಮಯ್ಯನವರ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನಾನು ದಿನಾಂಕಃ 07-04-1964 ರಂದು ಜನಿಸಿರುತ್ತೇನೆ. ನನಗೆ ಈಗ 52 ವರ್ಷ ವಯಸ್ಸಾಗಿರುತ್ತದೆ. ಹನುಮಂತಪ್ಪನವರು ಮೃತ ಪಟ್ಟ ನಂತರ ಆತನಿಗೆ ಸಂಬಂಧಪಟ್ಟ ಎಲ್ಲಾ ಆಸ್ತಿಗಳು ಶ್ರೀರಾಮಯ್ಯನವರ ಹೆಸರಿಗೆ ವರ್ಗಾವಣೆಯಾದವು ಎಂದರೆ ಸರಿಯಲ್ಲ. ನಾನು ಮದುವೆಯಾಗುವ ಕಾಲಕ್ಕೆ ಹನುಮಂತಪ್ಪರವರು ಮೃತ ಪಟ್ಟಿದ್ದರು. ನನ್ನ ಮದುವೆಯ ಕಾಲಕ್ಕೆ ಶ್ರೀರಾಮಯ್ಯನವರಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಶ್ರೀರಾಮಯ್ಯನವರಿಗೆ ಮದುವೆಯಾಗುವ ಕಾಲಕ್ಕೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆದರೆ ನಾನು 7-8 ನೇ ತರಗತಿ ಓದುತ್ತಿರುವಾಗ ಮದುವೆಯಾಗಿರುತ್ತದೆ. ಹನುಮಂತಪ್ಪರವರು ಮೃತ ಪಟ್ಟ ನಂತರ ನನ್ನ ತಾಯಿ ರಂಗಮ್ಮರವರು ಆತನಿಗೆ ಸೇರಿದ ಆಸ್ತಿಗಳು ನಮಗೆ ಬದಲಾವಣೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಗಳನ್ನು ಶ್ರೀರಾಮಯ್ಯ ರವರು ತಮ್ಮ ಹೆಸರಿಗೆ ಖಾತಾ ಬದಲಾವಣೆಗೆ ಸಂಬಂಧಪಟ್ಟಂತೆ ಎಂ.ಆರ್.16/2006-07 ಮತ್ತು ಎಂ.ಆರ್.13/2014-15 ನ್ನು ಮಾಡಿಸಿಕೊಳ್ಳುವ ಸಮಯದಲ್ಲಿ ನಾವುಗಳು ತಕರಾರನ್ನು ಸಲ್ಲಿಸಿರುವುದಿಲ್ಲ. ಆ ಎಂ.ಆರ್. ಗಳನ್ನು ಪ್ರಶ್ನಿಸಿ ನಾವುಗಳು ಮೇಲ್ಮನವಿ ಸಲ್ಲಿಸಿರುತ್ತೇವೆ. ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೆವೋ ಇಲ್ಲವೋ ನನಗೆ ಗೊತ್ತಿಲ್ಲ.

ವೆಂಕಟಮ್ಮರವರು ಮಧುಗಿರಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು

ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಂತ ಮನೆಯಲ್ಲಿಯೇ ವಾಸವಾಗಿದ್ದರು ಎಂದು ಸ್ವತಃ ನುಡಿಯುತ್ತಾರೆ. ಆಕೆಗೆ ಸಂಬಂಧಪಟ್ಟ ಸ್ವಂತ ಮನೆಯ ಖಾತಾ ನಂಬರನ್ನು ನಾನು ತಿಳಿದುಕೊಂಡಿರುವುದಿಲ್ಲ. ವೆಂಕಟಮ್ಮರವರು ಸ್ವಂತ ಮನೆ ಹೊಂದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೆವೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಮನೆಗೆ ಸಂಬಂಧಪಟ್ಟಂತೆ ಕಂದಾಯ ಪಾವತಿಸಿರುವ ಬಗ್ಗೆ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವೆಂಕಟಮ್ಮರವರು ಹನುಮಂತಪ್ಪನ ಹೆಂಡತಿ ಎಂಬುದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಶ್ರೀರಾಮಯ್ಯ ಮತ್ತು ರಂಗಮ್ಮರವರು ಒಂದೇ ಮಕ್ಕಳುಗಳು ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ